ನೋಡಲು ಬರುವುದಿಲ್ಲ; ಯಾಕೆಂದರೆ, ಅವರು ಹಾಗೇನಾದರೂ ಮಾಡಿದರೆ ಪಾರ್ಟಿಯಲ್ಲಿ ಅವರ ಸ್ಥಾನಕ್ಕೆ ಕುತ್ತು ಬರುತ್ತದೆ.'

'ನಿಜ...' ಎನ್ನುತ್ತಾ ಲೋಹಿಯಾ ಹೇಳಿದರು: 'ಇವತ್ತು ನಾನು ನನ್ನ ಹಳೆಯ ಗೆಳೆಯನೊಬ್ಬನನ್ನು ನೋಡಲು ಹೋಗುತ್ತಿದ್ದೇನೆಯೇ ಹೊರತು ರಾಜಕಾರಣಿಯನ್ನಲ್ಲ. ನನ್ನ ಗೆಳೆಯ ರಾಜಕೀಯ ಕಾರಣಗಳಿಗಾಗಿ ನನ್ನನ್ನು ನೋಡಲು ಜೈಲಿಗೆ ಬರಲು ಆಗದಿದ್ದರೆ, ಆ ಬಗ್ಗೆ ನಾನು ವಿಷಾದ ಪಡುವುದಿಲ್ಲ.'

ಗೋಪಾಲನ್ ಬಂಧನವನ್ನು ಲೋಹಿಯಾ ಲೋಕಸಭೆಯಲ್ಲಿ ಖಂಡಿಸಿದರು. ತಾವು ಒಪ್ಪದ ಸಿದ್ಧಾಂತಗಳನ್ನು ಪ್ರತಿನಿಧಿಸುವ ವ್ಯಕ್ತಿಗಳ ಜೊತೆಗಿನ ಲೋಹಿಯಾ ಸಂಬಂಧ ಈ ರೀತಿಯದಾಗಿತ್ತು. ಜನಸಂಘ ಕನೌಜ್ ಲೋಕಸಭಾ ಕ್ಷೇತ್ರದಲ್ಲಿ ತಮ್ಮನ್ನು ಸೋಲಿಸಲೆತ್ನಿಸಿದ ನಂತರವೂ, ಜನಸಂಘದ ವಾಜಪೇಯಿಯವರ ಜೊತೆಗಿನ ಸ್ನೇಹ ಲೋಹಿಯಾರಲ್ಲಿ ಉಳಿದಿತ್ತು. ಆದರೆ ಕಮ್ಯುನಿಸ್ಟ್ ಹಾಗೂ ಜನಸಂಘಗಳ ಜೊತೆಗಿನ ತಾತ್ವಿಕ ವಿರೋಧವೇನೂ ಕಡಿಮೆಯಾಗಿರಲಿಲ್ಲ.

ದೇಶ, ಸಮಾಜ, ಜನಸಮುದಾಯಗಳ ದೊಡ್ಡ ದೊಡ್ಡ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವಷ್ಟೇ ಗಂಭೀರವಾಗಿ ವ್ಯಕ್ತಿಗಳ ಬಿಕ್ಕಟ್ಟುಗಳನ್ನೂ ಲೋಹಿಯಾ ಕೈಗೆತ್ತಿಕೊಳ್ಳುತ್ತಿದ್ದರು. ರಷ್ಯಾದ ಸರ್ವಾಧಿಕಾರಿಯಾಗಿದ್ದ ಸ್ಟಾಲಿನ್ ಮಗಳು ಸ್ವೆತ್ಲಾನ ಹಾಗೂ ಭಾರತದ ಸ್ವಾತಂತ್ರ್ಯ ಹೋರಾಟಗಾರ, ಕಮ್ಯುನಿಸ್ಟ್ ಚಿಂತಕ ಬ್ರಿಜೇಶ್ ಸಿಂಹ ಪರಸ್ಪರ ಪ್ರೀತಿಸಿದರು. 1963ರಲ್ಲಿ ಶ್ವಾಸಕೋಶದ ಕಾಯಿಲೆಯ ಚಿಕಿತ್ಸೆಗೆಂದು ಬ್ರಿಜೇಶ್ ಮಾಸ್ಕೋಗೆ ಹೋಗಿದ್ದಾಗ ಈ ಸಂಬಂಧ ಬೆಳೆಯಿತು.

ಅಷ್ಟೊತ್ತಿಗೆ ಸ್ಟಾಲಿನ್ ತೀರಿಕೊಂಡಿದ್ದರು. ರಶ್ಯನ್ ಸರ್ಕಾರ ಬ್ರಿಜೇಶ್–ಸ್ವೆತ್ಲಾನರ ಮದುವೆಗೆ ಒಪ್ಪಲಿಲ್ಲ. ಇಬ್ಬರೂ ಪತಿ, ಪತ್ನಿಯರಂತೆ ಬದುಕತೊಡಗಿದರು. 31 ಅಕ್ಟೋಬರ್ 1966ರಂದು ಬ್ರಿಜೇಶ್ ಮಾಸ್ಕೋದಲ್ಲಿ ತೀರಿಕೊಂಡರು. ಬ್ರಿಜೇಶರ ಕೊನೆಯಾಸೆಯಂತೆ ಅವರ ಅಸ್ಥಿಯನ್ನು ಗಂಗಾ ನದಿಯಲ್ಲಿ ತೇಲಿ ಬಿಡಲು ಸ್ವೆತ್ಲಾನ ಉತ್ತರಪ್ರದೇಶದ ಪ್ರತಾಪಗಢ ಜಿಲ್ಲೆಯಲ್ಲಿರುವ ಬ್ರಿಜೇಶರ ಹುಟ್ಟೂರಾದ ಕಾಲಾಕಂಕಾರ್‌ಗೆ ಬಂದರು. ಬಳಿಕ ಸ್ವೆತ್ಲಾನ ಬ್ರಿಜೇಶರ ಊರಿನಲ್ಲೇ ಇರಲು ನಿರ್ಧರಿಸಿದರು. ಆಕೆಯನ್ನು ಭಾರತದಲ್ಲಿ ಇರಗೊಡಬಾರದೆಂದು ರಷ್ಯಾ ಸರ್ಕಾರ ಭಾರತ ಸರ್ಕಾರದ ಮೇಲೆ ಪರೋಕ್ಷ ಒತ್ತಡ ಹೇರಿತು.

ಸ್ವೆತ್ಲಾನ ಲೋಹಿಯಾಗೆ ಪತ್ರ ಬರೆದರು. ಬಿಡುವಿಲ್ಲದ ಚುನಾವಣಾ ಅಡ್ಡಾಟದ ನಡುವೆಯೂ ಸ್ವೆತ್ಲಾನ ಪರವಾಗಿ ಲೋಕಸಭೆಯ ಹೊರಗೂ ಒಳಗೂ ಲೋಹಿಯಾ ದನಿಯೆತ್ತಿದರು; ಆಕೆ 'ಭಾರತದ ಸೊಸೆ' ಎಂಬುದನ್ನು ನೆನಪಿಸುತ್ತಾ, 'ಸ್ವೆತ್ಲಾನ ಭಾರತದಲ್ಲಿದ್ದರೆ ರಷ್ಯಾಕ್ಕೇನು ತೊಂದರೆ?' ಎಂದು ಕೇಳಿದರು. ಇದೊಂದು ಮೂಲತಃ ಮಾನವೀಯ ಸಮಸ್ಯೆ ಎಂಬುದನ್ನು ಲೋಹಿಯಾ ಹೇಗೆ ಮನದಟ್ಟು ಮಾಡಿದರೆಂದರೆ, ಕಾಂಗ್ರೆಸ್ ಸದಸ್ಯರು ಕೂಡ ಅವರ ಮಾತಿಗೆ ತಲೆದೂಗಿದರು; ಕಾಂಗ್ರೆಸ್ ಸದಸ್ಯೆ ಲಕ್ಷ್ಮೀಕಾಂತಮ್ಮ ಹೇಳಿದರು:

'ಈ ಸಮಸ್ಯೆಯ ರಾಜಕೀಯ ಆಯಾಮಕ್ಕಿಂತ ಮಾನವೀಯ ಆಯಾಮ ಮುಖ್ಯವಾದುದು. ಎಷ್ಟೋ ಜನ ವಿದೇಶಿ ಮಹಿಳೆಯರು ಭಾರತದ ಆಶ್ರಮಗಳಲ್ಲಿ, ಯಾತ್ರಾ ಸ್ಥಳಗಳಲ್ಲಿ ತಂಗಬಹುದಾದರೆ, ಸ್ವೆತ್ಲಾನ ಭಾರತದಲ್ಲಿ ಇರುವುದಕ್ಕೆ ತೊಂದರೆಯೇನಿದೆ?'

ಸರ್ಕಾರ ಮೌನವಾಗಿತ್ತು. ಇಂದಿರಾಗಾಂಧಿಯವರ ಹೆಸರು ಹೇಳದೆಯೇ ಲೋಹಿಯಾ ಕುಟುಕಿದರು: 'ಒಂದು ಮಲ್ಲಿಗೆ ಸಿಂಹಾಸನದಲ್ಲಿ ಕೂತಿರುವ ತನಕ ಇನ್ನೊಂದು ಮಲ್ಲಿಗೆಗೆ ಇಲ್ಲಿ ಜಾಗವಿಲ್ಲ!'

'ನೀನು ನಮ್ಮ ಮನೆಯಲ್ಲೇ ಇರು; ಏನಾಗುತ್ತೋ ನೋಡೋಣ' ಎಂದು ಸ್ವೆತ್ಲಾನಾಗೆ ಲೋಹಿಯಾ ಹೇಳಿದರು. ಆದರೆ ಭಾರತದ ಮೇಲೆ ರಷ್ಯಾದ ಒತ್ತಡ ಹೆಚ್ಚಾದಂತೆ ಸ್ವೆತ್ಲಾನ ಭಾರತದಿಂದ ಹೊರಡಲು ಸಿದ್ಧರಾಗಿ, ಲೋಹಿಯಾಗೆ ಹೇಳಿದರು: 'ನೀವು ಸ್ವಾತಂತ್ರ್ಯ ಹೋರಾಟದಲ್ಲಿ ಗೆದ್ದಿದ್ದೀರಿ; ಇನ್ನು ಮುಂದೆ ನೀವು ರಷ್ಯಾ, ಅಮೆರಿಕಗಳಿಂದ ಸ್ವಾತಂತ್ರ್ಯ ಪಡೆಯಲು ಮತ್ತೊಂದು ಹೋರಾಟ ಆರಂಭಿಸಬೇಕಾಗುತ್ತದೆ.'

ಸ್ವೆತ್ಲಾನ ರಷ್ಯಾಕ್ಕೆ ಹೋದರೂ ಬ್ರಿಜೇಶ್ ಬಗೆಗಿನ ಪ್ರೀತಿ ಬತ್ತಲಿಲ್ಲ. ಬ್ರಿಜೇಶರ ಹೆಸರಿನಲ್ಲಿ ಕಾಲಕಂಕಾರ್‌ನಲ್ಲಿ ಬಡವರಿಗಾಗಿ ಆಸ್ಪತ್ರೆಯೊಂದನ್ನು ಕಟ್ಟಿಸಿದರು.

* * *

1967ರಲ್ಲಿ ಪ್ರಜಾ ಸಮಾಜವಾದಿ ಪಾರ್ಟಿಯ ನಾಥ್ ಪೈ ಸಂವಿಧಾನದ 368ನೇ ಪರಿಚ್ಛೇದದ ತಿದ್ದುಪಡಿಗಾಗಿ ಖಾಸಗಿ ನಿರ್ಣಯವೊಂದನ್ನು ಮಂಡಿಸಿದರು. ಸಂವಿಧಾನದ ಯಾವುದೇ ಉಪಬಂಧವನ್ನಾಗಲೀ ತಿದ್ದುಪಡಿ ಮಾಡುವ ಪರಮಾಧಿಕಾರವನ್ನು ಸಂಸತ್ತಿಗೆ ಕೊಡುವ ಅವಕಾಶ ಈ ಖಾಸಗಿ ನಿರ್ಣಯದಲ್ಲಿತ್ತು.

21 ಜುಲೈ 1967. ಲೋಹಿಯಾ ಈ ನಿರ್ಣಯವನ್ನು ವಿರೋಧಿಸುತ್ತಾ ಇದರ ಅಪಾಯವನ್ನು ವಿವರಿಸಿದರು. ಜರ್ಮನಿಯಲ್ಲಿ ಹಿಟ್ಲರ್ ಸರ್ವಾಧಿಕಾರಿಯಾಗಲು ವೆಯ್ಮರ್ ಸಂವಿಧಾನದ 42ನೇ ಪರಿಚ್ಛೇದದ ದುರುಪಯೋಗ ಕಾರಣ ಎಂಬುದನ್ನು ತೋರಿಸಿದರು. 42ನೇ ಪರಿಚ್ಛೇದದ ಆಧಾರದಿಂದ ಹಿಟ್ಲರ್ ರೂಪಿಸಿಕೊಂಡ ಪ್ರತಿಜ್ಞಾವಿಧಿಯನ್ನು 2 ಆಗಸ್ಟ್ 1934ರಂದು ಜರ್ಮನ್ ಸೇನೆ ಸ್ವೀಕರಿಸಬೇಕಾಯಿತು. ಜರ್ಮನ್ ಭಾಷೆಯಲ್ಲಿದ್ದ ಪ್ರತಿಜ್ಞಾವಿಧಿಯನ್ನು ಲೋಹಿಯಾ ಇಂಗ್ಲಿಷಿಗೆ ಭಾಷಾಂತರಿಸಿ ಹೇಳಿದರು:

'ನಾನು ಜರ್ಮನ್ ಜನತೆಯ ನಾಯಕರಾದ ಹಾಗೂ ಸೇನೆಯ ಮುಖ್ಯಸ್ಥರಾದ ಅಡಾಲ್ಫ್ ಹಿಟ್ಲರ್ ನೀಡುವ ನಿರ್ದೇಶನಗಳನ್ನು ಬೇಷರತ್ತಾಗಿ ಅನುಸರಿಸುತ್ತೇನೆ; ಅಂದರೆ, ಅವರ ನಿಯಂತ್ರಣದಡಿ ಕೆಲಸ ಮಾಡುತ್ತೇನೆ, ಧೀರ ಸೈನಿಕನಾಗಿರುತ್ತೇನೆ ಮತ್ತು ಈ ಪ್ರತಿಜ್ಞೆಯನ್ನು ಈಡೇರಿಸಲು ನನ್ನ ಪ್ರಾಣ ಕೊಡಲು ಸಿದ್ಧನಾಗಿರುತ್ತೇನೆ ಎಂದು ಈ ಪವಿತ್ರ ಪ್ರತಿಜ್ಞಾವಿಧಿಯನ್ನು ದೇವರ ಹೆಸರಿನಲ್ಲಿ ಸ್ವೀಕರಿಸುತ್ತೇನೆ.'

ಈ ಹಿನ್ನೆಲೆಯಲ್ಲಿ, ನಾಥ್ ಪೈ ಮಂಡಿಸಿರುವ ನಿರ್ಣಯವೇನಾದರೂ ಕಾನೂನಾದರೆ 'ಅದು ಸರ್ಕಾರ ಸ್ವೇಚ್ಛೆಯಿಂದ ಬಳಸಬಹುದಾದ ಆಯುಧವಾಗುತ್ತದೆ; ಸರ್ವಾಧಿಕಾರ ಸೃಷ್ಟಿಯಾಗುತ್ತದೆ' ಎಂದು ಲೋಹಿಯಾ ಎಚ್ಚರಿಸಿದರು.

ಲೋಹಿಯಾರ ಎಚ್ಚರಿಕೆಯನ್ನು ಲೋಕಸಭೆ ಗಂಭೀರವಾಗಿ ಪರಿಗಣಿಸಲಿಲ್ಲ. 1971ರಲ್ಲಿ ಈ ತಿದ್ದುಪಡಿ ಜಾರಿಯಾಯಿತು. ಪರಿಣಾಮವಾಗಿ, 1975ರ ತುರ್ತುಪರಿಸ್ಥಿತಿಯಲ್ಲಿ ಮೂಲಭೂತ ಹಕ್ಕುಗಳನ್ನು ಹೊಸಕಿ ಹಾಕುವ ಕರಾಳಹಸ್ತಗಳು ಮನೆಮನೆಯ ಬಾಗಿಲಿನವರೆಗೂ ಚಾಚಿಕೊಂಡವು. ಲೋಹಿಯಾರಂಥ ದೂರದೃಷ್ಟಿಯ ನಾಯಕ ಕೂಗಿ ಕೂಗಿ ಹೇಳಿದರೂ ಕೇಳಿಸಿಕೊಳ್ಳದ ದೇಶ ತನ್ನ ಸ್ವಾತಂತ್ರ್ಯವನ್ನೇ ಬೆಲೆಯಾಗಿ ತೆತ್ತಿತು.

ದೇಶದ ಜನರ ಸ್ಥಿತಿ ಬದಲಾಗದೆ, ಅವರಲ್ಲಿ ಹತಾಶೆ, ನಿರಾಶೆ ಆವರಿಸುತ್ತಿರುವುದನ್ನು ಕಂಡು ಲೋಹಿಯಾ ಖಿನ್ನರಾಗಿ ಲೋಕಸಭೆಯಲ್ಲಿ ಉದ್ಗರಿಸುತ್ತಿದ್ದರು: 'ನನ್ನದೇನಿದೆ? ನನಗುಳಿದಿರುವುದು ಕೆಲವೇ ಕೆಲವು ವರ್ಷ. ನನ್ನಂಥ ಮನುಷ್ಯ ಹೇಳುವುದನ್ನು ನೀವು ಕೇಳಿಸಿಕೊಳ್ಳಬೇಕು. ಈ ದೇಶ ಎಂಥ ಪ್ರಪಾತಕ್ಕೆ ಕುಸಿದಿದೆ ಎಂಬುದನ್ನು ನೋಡುತ್ತಾ ನಮ್ಮ ಹೃದಯಗಳು ಒಡೆದು ಚೂರಾಗುತ್ತಿವೆ...'

'ಭಾರತದ ರೈಲುಗಾಡಿ ಬೀಳಲು, ಅಥವಾ ಬಂಡೆಗೆ ಬಡಿದು ಚೂರಾಗಲು ಶರವೇಗದಲ್ಲಿ ಓಡುತ್ತಿದೆ. ಈ ಗಾಡಿ ಓಡಿಸಬೇಕಾದವರು ಓಡಿಸುವುದನ್ನೇ ಕೈಬಿಟ್ಟರು. ಈಗ ಗಾಡಿ ತನ್ನಷ್ಟಕ್ಕೇ ತಾನು ಓಡುತ್ತಿದೆ. ನಾನು ಈ ಗಾಡಿಯಲ್ಲಿ ಕೂತಿದ್ದೇನೆ. ಈ ಗಾಡಿ ಯಾವ ನಿಯಂತ್ರಣವೂ ಇಲ್ಲದೆ ಓಡುತ್ತಿದೆ. 'ನಿಲ್ಲಿಸಿ' ಎಂದು ಕಿರುಚುವುದಷ್ಟೇ ನನ್ನ ಕೈಲಾಗಬಹುದಾದ ಕೆಲಸ. ನನ್ನ ದನಿ ಗಟ್ಟಿಯಾಗಿಲ್ಲ ಎನ್ನುವುದಾದರೆ, ಸದನದ ಮಾನ್ಯ ಸದಸ್ಯರುಗಳು ಆ ನನ್ನ ಆಕ್ರಂದನವನ್ನಾದರೂ– 'ವಿನಾಶದಡೆಗೆ ಸಾಗುತ್ತಿರುವ ಈ ರೈಲುಗಾಡಿಯನ್ನು ನಿಲ್ಲಿಸಿ' ಎಂದು ಕೂಗಿ ಹೇಳಲೆತ್ನಿಸುತ್ತಿದ್ದೇನೆ ಎಂಬ ನನ್ನ ಆತ್ಮದ ಕೂಗನ್ನಾದರೂ– ಅರ್ಥ ಮಾಡಿಕೊಳ್ಳಲಿ.'

ಎಂಥ ಭ್ರಮನಿರಸನಗಳ ನಡುವೆಯೂ, ಸಮಾಜವಾದಿ ಪಕ್ಷದ ರಾಜಕೀಯ ಕಾರ್ಯಕರ್ತರ ಬಗ್ಗೆ ಲೋಹಿಯಾ ಭರವಸೆ ಕಳೆದುಕೊಳ್ಳಲಿಲ್ಲ. ಪ್ರತಿ ತಲೆಮಾರಿನಲ್ಲೂ ಆದರ್ಶಗಳು ಸೃಷ್ಟಿಯಾಗುತ್ತಲೇ ಇರುತ್ತವೆ ಎಂಬ ನಂಬಿಕೆಯಿಂದ 1967ರ ಜೂನ್ ತಿಂಗಳ ಸಮಾಜವಾದಿ ಶಿಬಿರದಲ್ಲಿ ಲೋಹಿಯಾ ಆಡಿದ ಎಚ್ಚರಿಕೆಯ ಮಾತುಗಳು:

'ಕ್ರಾಂತಿಕಾರರು ಅನೇಕ ಸಲ ತಾವು ಎಲ್ಲಿಂದ ಹೊರಟೆವು ಎಂಬುದನ್ನೇ ಮರೆತುಬಿಡುವುದುಂಟು... ಒಮ್ಮೆ ಅವರು ರಾಜಕೀಯ, ಆರ್ಥಿಕ ಅಥವಾ ಸಾಮಾಜಿಕ ಕ್ರಾಂತಿಯ ಆರಂಭಕ್ಕೆ ತಮ್ಮನ್ನು